# ನ್ಯಾಷನಲ್ ಚೈಲ್ಡ್ ಲೇಬರ್ ಪ್ರಾಜೆಕ್ಟ್ (N.C.L.P.)

1. ಪ್ರಾಥಮಿಕ ಶಿಕ್ಷಣದ ಮುಖ್ಯವಾದ ಗುರಿ – ಶಾಲೆಯಿಂದ ಹೊರಗೆ ಉಳಿದಿರುವ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದೇ ಆಗಿದೆ. ಶಾಲೆಯಿಂದ ಹೊರಗೆ ಉಳಿಯಲು ಕಾರಣಗಳು ಹಲವಾರು ಇದರಲ್ಲಿ ಬಾಲ ಕಾರ್ಮಿಕ ಪದ್ಧತಿಯು ಒಂದಾಗಿದೆ.

ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣದ ಗುರಿಯನ್ನು ಸಾಧಿಸಲು ಹಾಗೂ ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಸರ್ವ ಶಿಕ್ಷಣ ಅಭಿಯಾನ ಹಾಗೂ ಕಾರ್ಮಿಕ ಇಲಾಖೆಯೊಂದಿಗೆ ಪರಸ್ಪರ ಸಮನ್ವಯತೆಯಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಾಗೂ ಅನುಷ್ಠಾನಗೊಳಿಸಲು ಎನ್.ಸಿ.ಎಲ್.ಪಿ ಶಾಲೆಗಳನ್ನು ಕಾರ್ಮಿಕ ಇಲಾಖೆಯು ಪ್ರಾರಂಭಿಸಿದೆ.

ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

## ಉದ್ದೇಶ :

* ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡುವುದು.
* ದೇಶದ ಎಲ್ಲಾ ಮಕ್ಕಳು ಸಮಾನವಾದ / ಸಾದೃಶ್ಯವಾದ ಶಿಕ್ಷಣವನ್ನು ಪಡೆಯಬೇಕು ಎಂಬ ದೃಷ್ಟಿಯಿಂದ.
* ಅಪಾಯಕಾರಿ ಹಾಗೂ ಅಪಾಯಕಾರಿಯಲ್ಲದ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವ ಮಕ್ಕಳನ್ನು ಬಿಡುಗಡೆಗೊಳಿಸಿ ವಿದ್ಯಾಭ್ಯಾಸ ಕೊಡಿಸುವ ಸಲುವಾಗಿ ಈ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.
* ಪ್ರಾಥಮಿಕ ಶಿಕ್ಷಣ ಸಾರ್ವತ್ರಿಕ ಧಾರಣವನ್ನು (Universal Retention) ಕಾಯ್ದುಕೊಳ್ಳುವುದು.

## ವ್ಯಾಪ್ತಿ :

* ಬಾಲ ಕಾರ್ಮಿಕ ಮಕ್ಕಳಿಗಾಗಿ.
* ಶಾಲೆ ಬಿಟ್ಟ ಮಕ್ಕಳಿಗಾಗಿ, ಹಾಗೂ ಶಾಲೆಗೆ ಸೇರದಿರುವ ಮಕ್ಕಳಿಗಾಗಿ.
* ಇದು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆಯುವಂತಹದು.

## ಯಾರು ನಡೆಸಬೇಕು ?

* ಒಡಂಬಡಿಕೆ ಆಧಾರದ ಮೇಲೆ ವಸತಿಯುತ ಕೇಂದ್ರವಾಗಿದ್ದರೆ, ಸರ್ವ ಶಿಕ್ಷಣ ಅಭಿಯಾನದಿಂದ ಅನುದಾನ ನೀಡಲಾಗುತ್ತಿದೆ.
* ಸ್ವಯಂ ಸೇವಾ ಸಂಸ್ಥೆಗಳು ನಡೆಸಬಹುದಾಗಿದೆ.

## ಸಮನ್ವಯ ಸಾಧಿಸಬೇಕಾದ ಕ್ಷೇತ್ರಗಳು ಹಾಗೂ ಅಳವಡಿಸಬೇಕಾದ ಕಾರ್ಯತಂತ್ರಗಳು

* ಬಾಲ ಕಾರ್ಮಿಕ ನಿರ್ಮೂಲನೆಗೆ ಅವಶ್ಯವಾದ ಮಾಹಿತಿಯ ಪರಸ್ಪರ ಹಂಚಿಕೆ, ಶಿಕ್ಷಣ ಇಲಾಖೆ ಮತ್ತು ಕಾರ್ಮಿಕ ಇಲಾಖೆಗಳು ತಮ್ಮಲ್ಲಿ ಲಭ್ಯವಾದ ಶಾಲೆಯಿಂದ ಹೊರಗುಳಿದ ಮಕ್ಕಳ ಮಾಹಿತಿಯನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದು. ಈ ಮಾಹಿತಿ ಹಾಗೂ ಶಾಲಾ ವಯಸ್ಸಿನ ಮಕ್ಕಳ ಮಾಹಿತಿಯನ್ನು ಗ್ರಾಮ ಪಂಚಾಯಿತಿ ಮತ್ತು ಟಿ.ಪಿ.ಎಸ್ ನಲ್ಲಿ ರೂಢಿಸಲು ಕ್ರಮ ತೆಗೆದುಕೊಳ್ಳುವುದು.
* ಶಿಕ್ಷಣ ಇಲಾಖೆಯಿಂದ ನಡೆಸಲಾಗುತ್ತಿರುವ ಕಾರ್ಯತಂತ್ರಗಳೊಂದಿಗೆ ಕಾರ್ಮಿಕ ಇಲಾಖೆ ನಡೆಸುತ್ತಿರುವ ಎನ್.ಸಿ.ಎಲ್.ಪಿ ಶಾಲೆಗಳು ಮಕ್ಕಳ ಮಾಹಿತಿ ಆಯಾ ಜಿಲ್ಲೆ / ತಾಲ್ಲೂಕು ಸಮಿತಿಯ ಬಳಿ ಕಡ್ಡಾಯವಾಗಿ ಇರಲು ವ್ಯವಸ್ಥೆಗೊಳಿಸುವುದು.

2. ಶಿಕ್ಷಣ ಇಲಾಖೆಯ ಯಾವುದೇ ಕಾರ್ಯಕ್ರಮದ ಯಶಸ್ಸು ಜನಪ್ರತಿನಿಧಿಗಳ, ಎನ್.ಜಿ.ಒ ಗಳ, ಶಿಕ್ಷಕರ ಸಂಘಗಳ, ಎಸ್.ಡಿ.ಎಂ.ಸಿ ಸಮುದಾಯ ಮುಖಂಡರ ಇತ್ಯಾದಿಗಳ ಸಹಕಾರ ಮತ್ತು ಸಮನ್ವಯತೆಯನ್ನು ಅವಲಂಬಿಸಿದೆ. ಮೇಲಿನ ಅಂಶಗಳು ಮಗುವಿನ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಿರುವುದರಿಂದ ಸೂಕ್ತವಾಗಿ ಬಳಸಿಕೊಳ್ಳುವುದು. ಸ್ಥಳೀಯವಾಗಿ ಗ್ರಾಮಮಟ್ಟದ ಹಾಗೂ ಕ್ಲಸ್ಟರ್ ಮಟ್ಟದ ವಿವಿಧ ಸಂಘಸಂಸ್ಥೆಗಳೂ, ಜನಪ್ರತಿನಿಧಿಗಳೂ ಸಮುದಾಯ ಮುಖಂಡರನ್ನು ಬಳಸಿಕೊಂಡು ಅಗತ್ಯ ನೆರವು ಸಹಕಾರ

ಪಡೆದು ಸಮನ್ವಯತೆ ಸಾಧಿಸುವುದು. ಶಾಲೆ ಬಿಟ್ಟ ಮಕ್ಕಳನ್ನು ಹಾಗೂ ದೀರ್ಘಕಾಲ ಗೈರುಹಾಜರಾಗುವ ಮಕ್ಕಳನ್ನು ಗುರುತಿಸುವಲ್ಲಿ ಅವರನ್ನು ಮುಖ್ಯವಾಹಿನಿಗೆ ಕರೆತರುವಲ್ಲಿ ಹಾಗೂ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಪರಿಹಾರ ಬೋಧನಾ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಕಲಿಕೆ ಪ್ರಗತಿ ಸಾಧಿಸುವಲ್ಲಿ ಜಾಗೃತಿ ಮೂಡಿಸುವಲ್ಲಿ ಮಕ್ಕಳಿಗೆ ಸೌಲಭ್ಯ ದೊರಕಿಸುವಲ್ಲಿ ದತ್ತು ಸ್ವೀಕಾರ ಮೂಲಕ ಮಕ್ಕಳ ವಿದ್ಯಾಭ್ಯಾಸದಲ್ಲಿ ಪಾಲ್ಗೊಳ್ಳುವ ಬಗ್ಗೆ ಅವರನ್ನು ಸೂಕ್ತವಾಗಿ ಬಳಸಿಕೊಳ್ಳಬಹುದಾಗಿದೆ.

3. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲು ಹಾಗೂ ಸಂಬಂಧಿತ ಮಾಹಿತಿ ಸಂಗ್ರಹಿಸಲು ಪತ್ರಿಕಾಗೋಷ್ಠಿ ವ್ಯಾಪಕ ಪ್ರಚಾರ ಕೈಗೊಳ್ಳುವುದು. ಶಾಲೆಯಿಂದ ಹೊರಗುಳಿದ ಮಕ್ಕಳ ವಿವರಗಳನ್ನು ಜಿಲ್ಲಾ / ತಾಲ್ಲೂಕು ಹಂತದಲ್ಲಿ ಫಲಕದಲ್ಲಿ ಪ್ರಕಟಿಸಿ ವರ್ಷಕ್ಕೆ ಎರಡು ಬಾರಿ ಅಂಕಿ ಅಂಶಗಳು ಅಪ್‌ಡೇಟ್ ಮಾಡಿಸಲು ಕ್ರಮ ವಹಿಸುವುದು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಹ ಈ ವಿವರವನ್ನು ಪ್ರಕಟಿಸುವುದು ಫಲಕಗಳನ್ನು ಹೆಚ್ಚು ಜನರು ಗಮನಿಸುವಂತಹ ಸ್ಥಳದಲ್ಲಿ ಸನ್ನಿವೇಶಗಳಿಗೆ ಪೋಷಕರು ಹಾಗೂ ಸಮುದಾಯಕ್ಕೆ ಜಾಗೃತಿ ಸಮಾವೇಶಗಳನ್ನು ಆಯೋಜಿಸುವ ಮೂಲಕ ಬಾಲ ಕಾರ್ಮಿಕ ಪದ್ಧತಿಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳುವುದು.

* ಬಾಲ ಕಾರ್ಮಿಕರನ್ನು ಗುರುತಿಸಿ ಸಂಬಂಧಿಸಿದ ಮಾಲೀಕರ ಮೇಲೆ ಪ್ರಕರಣ ದಾಖಲು ಮಾಡುವ ಅಧಿಕಾರ ಕಾರ್ಮಿಕ ಇಲಾಖೆಗೆ ಇದ್ದು, ಈ ಅಧಿಕಾರವನ್ನು ಇತರೆ ಕೆಲವು ಇಲಾಖೆಗಳಿಗೆ ಈಗಾಗಲೇ ವಿಸ್ತರಿಸಲಾಗಿದ್ದು, ಸೆಕ್ಷನ್ 17 ರಂತೆ ಗುರುತಿಸಿದಂತಹ ಬಾಲ ಕಾರ್ಮಿಕ ಮಕ್ಕಳ ಮೇಲೆ ಲಿಟಿಗೇಷನ್ ಹಾಕಿದ್ದಲ್ಲಿ ಮಾತ್ರ ಸರ್ಕಾರದಿಂದ ಸೌಲಭ್ಯ / ಪರಿಹಾರ ದೊರೆಯುವ ಸಾಧ್ಯತೆ ಇರುವುದು ಅದರಂತೆ ಕ್ರಮ ಮಾಡುವುದು. ಸಂಬಂಧಿಸಿದ ಸಂಪೂರ್ಣ ಮಾಹಿತಿ ಹಾಗೂ ದಾವೆ ಹೂಡಿದ ಪ್ರಕರಣಗಳ ಸಂಖ್ಯೆ ಸಂಗ್ರಹಿಸಿ ಕೇಂದ್ರ ಸಮಿತಿಗೆ ವರದಿ ಮಾಡುವುದು.

* ತಾಲ್ಲೂಕು ಹಂತದಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಗಳು (ಬಿಇಓ / ಬಿಆರ್‌ಸಿ) ಬಾಲ ಕಾರ್ಮಿಕ ಮಕ್ಕಳು ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳ ಮಾಹಿತಿ / ಸಂಖ್ಯೆ ಪರಿಶೀಲಿಸಿ ಮರುಪರಿಶಿಲನೆಯ ಮೂಲಕ ಖಾತ್ರಿಪಡಿಸಿ ನಂತರ ಎನ್.ಸಿ.ಎಲ್.ಪಿ ಶಾಲೆಗಳಿಗೆ ಮಂಜೂರಾತಿ ನೀಡಬೇಕು. ಹಾಗೂ ಈ ಮಕ್ಕಳ ವಿವರವನ್ನು ತಾಲ್ಲೂಕು ಹಂತದ ಸಮಿತಿ ಪರಿಶೀಲಿಸಿ ಡೂಪ್ಲಿಕೇಶನ್ ಪತ್ತೆ ಹಚ್ಚಿ ಕ್ರಮ ಮಾಡಬೇಕು. ಪ್ರತಿ ವಸತಿಯುತ ಅಥವಾ ವಸತಿರಹಿತ ಕೇಂದ್ರಗಳು ತಮ್ಮ ಕೇಂದ್ರದಲ್ಲಿ ಸೇರಿರುವ ಮಕ್ಕಳ ವಿವರವನ್ನು ಆ ಮಕ್ಕಳು ಸೇರಿದ್ದು ಮೂಲ ಶಾಲೆಗೆ ನೀಡುವುದನ್ನು ಖಾತ್ರಿಪಡಿಸಿಕೊಳ್ಳಬೇಕು.

* ಅನೌಪಚಾರಿಕ ಶಿಕ್ಷಣ ಕೇಂದ್ರಗಳಲ್ಲಿ, ದೀರ್ಘಾವಧಿ ಸೇತುಬಂಧ ಕೇಂದ್ರಗಳಲ್ಲಿ ಹಾಗೂ ಎನ್.ಸಿ.ಎಲ್.ಪಿ ಕೇಂದ್ರಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳು ಕ್ಲುಪ್ತ ಅವಧಿಯಲ್ಲಿ ಮುಖ್ಯವಾಹಿನಿಗೆ ಸೇರ್ಪಡೆ ಮಾಡಲು ಕ್ರಮ ಕೈಗೊಳ್ಳುವುದು. ಈ ಅಂಶವನ್ನು ಎನ್.ಜಿ.ಒಗಳ ಜೊತೆ ಒಡಂಬಡಿಕೆ ಮಾಡಿಕೊಳ್ಳುವಾಗ ಕಟ್ಟುನಿಟ್ಟಾಗಿ ಪಾಲಿಸುವುದು. ಈ ಸಂಗತಿಯ ಕಾರ್ಯಾನುಷ್ಠಾನವನ್ನು ಸಮಿತಿಯು ಪರಿಶೀಲಿಸುವುದು.

4. ಶಾಲೆಗಳನ್ನು ಕೇಂದ್ರ ಸರ್ಕಾರದ ಧನಸಹಾಯದಿಂದ ರಾಜ್ಯ ಕಾರ್ಮಿಕ ಇಲಾಖೆ ಜಿಲ್ಲಾಧಿಕಾರಿಗಳ ಮೂಲಕ ನಡೆಸುತ್ತಿದೆ. ಇವು ವಸತಿರಹಿತ 12 ತಿಂಗಳ ಸೇತುಬಂಧ ಕೇಂದ್ರಗಳಾಗಿವೆ. AWP ಮತ್ತು B 2009ರಲ್ಲಿ ಕೆಲವು ಜಿಲ್ಲೆಗಳ NCLP ಶಾಲೆಗಳನ್ನು ವಸತಿಯುತ ಕೇಂದ್ರಗಳನ್ನಾಗಿ ನಡೆಸಲು ಅನುದಾನವು ಮಂಜೂರಾಗಿರುತ್ತದೆ. ಮಂಜೂರಾತಿ ದೊರೆತಿರುವ ಜಿಲ್ಲೆಗಳವರು – ಈ ಕೇಂದ್ರಗಳಿಗೆ ಭೇಟಿ ನೀಡಿ ಅವು ವಸತಿಯುತ ಕೇಂದ್ರಗಳೇ ಎಂಬುದನ್ನು ಖಾತ್ರಿ ಮಾಡಿಕೊಂಡು ಹಾಜರಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಜಿಲ್ಲಾಧಿಕಾರಿಗಳಿಗೆ ಪ್ರತಿ ಮಗುವಿಗೆ ರೂ. 3000/- ದಂತೆ ಹಣ ನೀಡುವುದು ಹಾಗೂ ಬಳಕೆ ಪ್ರಮಾಣ ಪತ್ರ ಪಡೆಯುವುದು. ಈ ಕೇಂದ್ರಗಳಲ್ಲಿ ಹಣ ಬಳಕೆಯಾಗುತ್ತಿರುವ ಕುರಿತು ಮತ್ತು ಶಿಕ್ಷಣ ನೀಡುತ್ತಿರುವ ಕ್ರಮದ ಕುರಿತು ಆಗಾಗ್ಗೆ ಭೇಟಿ ನೀಡಿ ವರದಿಯನ್ನು ಜಿಲ್ಲಾಧಿಕಾರಿಯವರಿಗೆ ನೀಡಿ ಕ್ರಮ ಕೈಗೊಳ್ಳಲು ಕೋರುವುದು. ಸರ್ವ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರು ಮತ್ತು ಕಾರ್ಮಿಕ ಇಲಾಖೆ ಆಯುಕ್ತರ ನಡುವೆ ಒಪ್ಪಂದ ಏರ್ಪಟ್ಟಿದೆ. ಒಪ್ಪಂದದ ಇತರ ಅಂಶಗಳು ಈಗಲೂ ಪ್ರಸ್ತುತವಿದ್ದು ಅನುಸರಿಸಲು ಸೂಚಿಸಲಾಗಿದೆ. ದಿನಾಂಕ : 01-06-2010ರಂದು ಈ ಮಕ್ಕಳನ್ನು ಮುಖ್ಯವಾಹಿನಿಗೆ ಸೇರಿಸಿ ಬಿ.ಇ.ಓ ಕಛೇರಿಗೆ ವರದಿ ಮಾಡುವುದು.

ಈ ಶಾಲೆಗಳಿಗೆ ದಾಖಲಾದ ಮಕ್ಕಳ ವಿವರವನ್ನು – ಈ ಮಕ್ಕಳು ಗೈರುಹಾಜರಾದ ಶಾಲೆಗೆ ಕಳುಹಿಸಲು ಸೂಕ್ತ ಕ್ರಮವನ್ನು ಆಯಾ ಕೇಂದ್ರದ ಶಿಕ್ಷಕರು ಮತ್ತು ಜಿಲ್ಲಾ ಬಾಲಕಾರ್ಮಿಕ ಮಕ್ಕಳ ಕೋಶವು ಕ್ರಮವಹಿಸತಕ್ಕದ್ದು.

* * * * *